ದಿನಾಂಕ 05.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ **6** ಮತ್ತು **7** ರ ಪರ ವಕೀಲರು ಹಾಜರಿದ್ದು, ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಾಕಾಶ ಕೋರಿದ್ದು, ಸಮಂಜಸವಾದ ಕಾರಣ ನೀಡದೇ ಇರುವುದರಿಂದ, ಕೋರಿಕೆಯನ್ನು ತಿರಸ್ಕರಿಸಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

<u>ಪಾಟೀ ಸವಾಲುಃ ಶ್ರೀ.ಸಿ.ಕೆ.ಪಿ. ವಕೀಲರಿಂದಃ</u>

ನಾನು ಮುಕ್ಕಟಿರ ಕುಟುಂಬಕ್ಕೆ ಸೇರಿದವನಾಗಿರುತ್ತೇನೆ. ನನ್ನ ಅಜ್ಜನ ಹೆಸರು ಪೆಮ್ಮಯ್ಯ. 5 ನೇ ಪ್ರತಿವಾದಿಯ ತಂದೆಯ ಹೆಸರು ಸುಬ್ಬಯ್ಯ. ಮೇದಪ್ಪನವರಿಗೆ ಸೋಮಯ್ಯ ಮತ್ತು ಸುಬ್ಬಯ್ಯ ಎಂಬ ಇಬ್ಬರು ಮಕ್ಕಳು. ಮುಕ್ಕಟೀರ ಸುಬ್ಬಯ್ಯರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳಿದ್ದು, ಅವರೆಲ್ಲರೂ ಈಗ ಮೃತರಾಗಿರುತ್ತಾರೆ. ಸುಬ್ಬಯ್ಯನ ಒಂದನೇ ಮಗನಾದ ಕರುಂಬಯ್ಯ ಮತ್ತು ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಕರುಂಬಯ್ಯ ಮತ್ತು ಅವರ ವಾರಸುದಾರರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಕರುಂಬಯ್ಯರವರಿಗೆ ದಾವಾ ಸ್ವತ್ತುಗಳಲ್ಲಿ ಹಕ್ಕು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಮೇದಪ್ಪರವರ ಭಾಗದವರಿಗೆ ದಾವಾ ಸ್ವತ್ತುಗಳಲ್ಲಿ ಅರ್ಧ ಹಿಸ್ಸೆ ಇದೆ. ನಾನು ಒಟ್ಟು ಎಷ್ಟು ಎಕರೆ ಜಮೀನಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೇನೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ. 148/1 ಮತ್ತು 152/1 ಬಾಣೆ ಜಮೀನುಗಳು.

ಮುಕ್ಕಟೀರ ಕರುಂಬಯ್ಯರವರ ಹೆಸರಿನಲ್ಲಿ ಸರ್ವೆ ನಂ. 48 ರಲ್ಲಿ 48 ಎಕರೆ 59 ಸೆಂಟ್ಸ್ ಜಮೀನು ಇದ್ದು, ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

ಸದರಿ ಜಮೀನಿನ ಮೇಲೆ ಕಾರ್ಯಪ್ಪ ಮತ್ತು ಚಿನ್ನಪ್ಪರವರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಕಾರ್ಯಪ್ಪ ಮತ್ತು ಚಿನ್ನಪ್ಪರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸರ್ವೆ ನಂ. 48 ರಲ್ಲಿ 15 ಎಕರೆ ಜಮೀನ್ನು ಮುಕ್ಕಟೀರ ಚಿನ್ನಪ್ಪರವರು ಮೂಕಳೇರಾ ರಾಜರವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಮುಕ್ಕಟೀರಾ ಕಾರ್ಯಪ್ಪರವರಿಗೆ ಇಬ್ಬರು ಗಂಡು ಮಕ್ಕಳು ಇದ್ದು, ಒಬ್ಬ ಹೆಣ್ಣು ಮಗಳು ಇರುವ ವಿಚಾರ ನನಗೆ ಗೊತ್ತಿಲ್ಲ. ಮೇದಪ್ಪರವರ ವಾರಸುದಾರರೆಲ್ಲರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

10 ನೇ ಪ್ರತಿವಾದಿ ಮುಕ್ಕಟೀರ ಕುಟುಂಬಕ್ಕೆ ಸೇರಿದವರಲ್ಲ. ಅವರು ದಿಃ 26.10.2013 ರಂದು ಸರ್ವೆ ನಂ. 148/1 ರಲ್ಲಿ 1 ಎಕರೆ ಜಮೀನನ್ನು ಪ್ರತಿವಾದಿ 5 ರಿಂದ 9 ರವರುಗಳಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಕ್ರಯಪತ್ರವನ್ನು ಜಾನ್ಸಿ ಡಿ.ಆರ್. ಎಂಬ ವಕೀಲರು ತಯಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಕೀಲರು ನನ್ನ ಈಗಿನ ವಕೀಲರ ಬಳಿ ಕಿರಿಯ ವಕೀಲರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ವಿಚಾರ ನನಗೆ ಮಾರ್ಚ್ 2021 ರಲ್ಲಿ ಗೊತ್ತಾಗಿರುತ್ತದೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.